# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

ಪ್ರೊ. ಬಿ.ಈ. ರಂಗಸ್ವಾಮಿ ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ : 0831-2405468
ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ/ಬಿಜಿಎಮ್/ಪ್ರಸಾರಂಗದ ವಿಭಾಗ/01/2024-25/ 24 ದಿನಾಂಕ: 29 OCT 2024

**:ಸುತ್ತೋಲೆ:**

***ವಿಷಯ:*** ವಿತಾವಿಯಿಂದ ಪ್ರಕಟಗೊಂಡಿರುವ *ಬಳಕೆ ಕನ್ನಡ ಮತ್ತು ಸಾಂಸ್ಕೃತಿಕ ಕನ್ನಡ* ಪಠ್ಯಪುಸ್ತಕಗಳನ್ನು 2024-25ನೇ ಸಾಲಿಗೆ ಖರೀದಿಸುವ ಬಗ್ಗೆ.

ಉಲ್ಲೇಖ:1.ವಿತಾವಿ/ಬೆಳಗಾವಿ/ಪ್ರಸಾರಂಗ/2020-21/5566 ದಿನಾಂಕ: 30.01.2021

2. ಮಾನ್ಯ ಕುಲಪತಿಗಳ ಅನುಮೋದನೆ ಕ್ರಮ ಸಂ.04 ದಿನಾಂಕ:16.10.2024

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವೃತ್ತಿಪರ ಶಿಕ್ಷಣದಲ್ಲಿ ಕನ್ನಡ ಭಾಷ ವಿಷಯವನ್ನು ಕಡ್ಡಾಯವಾಗಿ ಬೋಧಿಸುವ ಸಲುವಾಗಿ ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಸಾರಂಗ ವಿಭಾಗದ ಮೂಲಕ *ಬಳಕೆ ಕನ್ನಡ (ಕನ್ನಡೇತರರಿಗೆ) ಹಾಗೂ ಸಾಂಸ್ಕೃತಿಕ ಕನ್ನಡ (ಕನ್ನಡ ಬಲ್ಲವರಿಗೆ)* ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದೆ. ಬಿ.ಇ/ಬಿ.ಟೆಕ್/ಬಿ.ಪ್ಲಾನ್‌ನ 3/4ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಮತ್ತು ಬಿ.ಇ.-ಆರ್ಕಿಟೆಕ್ಚರ್ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು ಕಡ್ಡಾಯವಾಗಿ ಅಧ್ಯಾಯ ಮಾಡಲು ಸದರಿ ಪುಸ್ತಕಗಳು ಸೂಕ್ತವಾಗಿವೆ. ಆದ್ದರಿಂದ, 2024-25ನೇ ಶೈಕ್ಷಣಿಕ ಸಾಲಿಗೆ ಸಂಬಂದಿಸಿದಂತೆ ದಾಖಲಾತಿ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ಕನ್ನಡ ಪುಸ್ತಕಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಆದೇಶಿಸಲಾಗಿದೆ.

- *ಸಾಂಸ್ಕೃತಿಕ ಕನ್ನಡ* ಪುಸ್ತಕದ ಬೆಲೆ ರೂ. 50/- ಗಳು ಮಾತ್ರ
- *ಬಳಕೆ ಕನ್ನಡ* ಪುಸ್ತಕದ ಬೆಲೆ ರೂ.60/- ಗಳು ಮಾತ್ರ

***ಸದರಿ ಪುಸ್ತಕಗಳನ್ನು ಆನ್ ಲೈನ್ ಮುಂಖಾತರ ಖರೀದಿಸುವ ಪ್ರಕ್ರೀಯೆ ಈ ಕೆಳಗಿನಂತಿದೆ.***

1) https://prasaranga.vtu.ac.in ಈ ವೆಬಸೈಟ್‌ನ್ನು ತೆರೆಯುವುದು.
2) ಮಹಾವಿದ್ಯಾಲಯಗಳ ಪ್ರಾಂಶುಪಾಲರು ಪರೀಕ್ಷಾ ಕೆಲಸಕ್ಕೆ ಬಳಸುವ ಕ್ರೇಡೆನ್ಸಿಯಲ್ ಮೂಲಕ ಲಾಗಿನ್ ಆಗುವುದು.
3) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪುಸ್ತಕಗಳ ಸಂಖ್ಯೆಗಳನ್ನು ನಮೂದಿಸುವುದು.
4) ಸಂಬಂದಿಸಿದ ಒಟ್ಟು ಮೊತ್ತವನ್ನು ಆನ್‌ಲೈನ್ (online-SBI) ಎಸ್.ಬಿ.ಐ. ಕಲೆಕ್ಟ್ ಮುಖಾಂತರ PRASARANGA-KANNADA TEXT BOOKS ಎಂಬ ಹೆಡ್ ಆಯ್ಕೆ ಮಾಡಿ ಹಣವನ್ನು ಪಾವತಿಸುವುದು.
5) ಹಣ ಪಾವತಿಯ ಈ ಮಾಹಿತಿಯನ್ನು ಇದೆ ವೆಬಸೈಟ್‌ನಲ್ಲಿ ತುಂಬಿ ಪುಸ್ತಕ ಖರೀದಿಗಾಗಿ ಆದೇಶವನ್ನು (Order) ಸಲ್ಲಿಸುವುದು. ತಮ್ಮ ಮಾಹಿತಿ ಆಧಾರಿಸಿ ವಿತಾವಿಯ ಪ್ರಸಾರಂಗ ವಿಭಾಗದಿಂದ ಪುಸ್ತಕಗಳನ್ನು ಮಹಾವಿದ್ಯಾಲಯಕ್ಕೆ ಕಳುಹಿಸಿಕೊಡಲಾಗುವುದು. ಸದರಿ ಪುಸ್ತಕಗಳ

   ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇ–ಮೇಲ್:prasaranga@vtu.ac.in ಗೆ ಅಥವಾ ಈ ದೂರವಾಣಿ ನಂ. 0831-2498155 ಸಂಪರ್ಕಿಸಬಹುದು

28/10/24

ಕುಲಸಚಿವರು

*ಇವರಿಗೆ,*

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು,
ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ
ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

*ಪ್ರತಿಯನ್ನು ಮಾಹಿತಿಗಾಗಿ:*

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ವಿ.ತಾ.ವಿ. ಬೆಳಗಾವಿ.
3. ಪ್ರಾದೇಶಿಕ ನಿರ್ದೇಶಕರು, ವಿತಾವಿ ಪ್ರಾದೇಶಿಕ ಕೇಂದ್ರಗಳಾದ ಬೆಳಗಾವಿ, ಬೆಂಗಳೂರು, ಮೈಸೂರು ಮತ್ತು ಕಲಬುರಗಿ ಇವರಿಗೆ ವಿವಿಧ ವಿಭಾಗದಲ್ಲಿ ಪ್ರವೇಶ ಪಡೆದ ಪದವಿ ವಿದ್ಯಾರ್ಥಿಗಳು ಕನ್ನಡ ಪುಸ್ತಕಗಳನ್ನು ಖರೀದಿಸುವಂತೆ ಸೂಕ್ತ ಕ್ರಮಕೈಗೊಳ್ಳುವುದು.
4. ವಿಶೇಷಾಧಿಕಾರಿಗಳು, ಸಿ.ಎಸ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ